ಉಪಾಧ್ಯಕ್ಷರು :- ಅರ್ಜಿಯನ್ನು ಒಪ್ಪಿಸಲಾಯಿತು.

ಮಂತ್ರಿಗಳ ಹೇಳಿಕೆ.

ವಿಷಯ : ರಾಜ್ಯದಲ್ಲಿ ವಿದ್ಯುತ್ ಕಡಿತವನ್ನು ವಿಧಿಸುವ ಬಗ್ಗೆ :-

+**ಶ್ರೀ ಎಂ. ಸಿ. ನಾಣಯ್ಯ :-** ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಉಪ ಮುಖ್ಯ ಮಂತ್ರಿಗಳು, ವಿದ್ಯುತ್ ಮಂತ್ರಿಗಳ ಪರವಾಗಿ ರಾಜ್ಯದಲ್ಲಿ ವಿದ್ಯುತ್ ಕಡಿತವನ್ನು ವಿಧಿಸುವ ಬಗ್ಗೆ ಒಂದು ಹೇಳಿಕೆಯನ್ನು ತಮ್ಮ ಅನುಮತಿ ಪಡೆದು ಓದುತ್ತಿದ್ದೇನೆ.

ರಾಜ್ಯದಲ್ಲಿ ಮುಂಗಾರು ಮಳೆಯ ವಿಫಲತೆಯಿಂದಾಗಿ ರಾಜ್ಯದ ಪ್ರಮುಖ ಜಲ ವಿದ್ಯುತ್ ಉತ್ಪಾದನಾ ಕೇಂದ್ರಗಳ ಜಲಾಶಯಗಳಲ್ಲಿ ನೀರಿನ ಮಟ್ಟವು ಕಡಿಮೆ ಆಗಿದೆ. ವಿದ್ಯುತ್ ಪರಿಸ್ಥಿತಿಯು ಬಹಳ ಕಳವಳಕಾರಿಯಾಗಿದ್ದು, ರಾಜ್ಯವು ವಿದ್ಯುತ್ತಿನ ವಿಷಮ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಕಳೆದ ಎರಡು ವಾರಗಳಲ್ಲಿ ಸ್ವಲ್ಪ ಮಳೆಯಾಗಿದ್ದರೂ ಪರಿಸ್ಥಿತಿಯು ಕಳವಳಕಾರಿಯಾಗಿಯೇ ಮುಂದುವರೆದಿದೆ. ದಿನಾಂಕ 16-9-95 ರಲ್ಲಿರುವಂತೆ ಪ್ರಮುಖ ಜಲ ವಿದ್ಯುತ್ ಜಲಾಶಯಗಳಿಂದ, ಅಂದರೆ ಲಿಂಗನಮಕ್ಕಿ, ಸೂಪ ಮತ್ತು ಮಣಿ ಜಲಾಶಯಗಳಿಂದ ಲಭ್ಯವಿರುವ ವಿದ್ಯುತ್ ಪ್ರಮಾಣ ಅನುಕ್ರಮವಾಗಿ 2826 ದಶಲಕ್ಷ ಯೂನಿಟ್, 1185 ದಶಲಕ್ಷ ಯೂನಿಟ್ ಮತ್ತು 484 ದಶಲಕ್ಷ ಯೂನಿಟ್, ಒಟ್ಟು ಲಭ್ಯವಿರುವ ವಿದ್ಯುತ್ ಪ್ರಮಾಣ 4495 ದಶಲಕ್ಷ ಯೂನಿಟ್. ಕಳೆದ ವರ್ಷ ಇದೇ ದಿನದಂದು ಈ ಜಲಾಶಯಗಳಿಂದ ಲಭ್ಯವಿದ್ದ ವಿದ್ಯುತ್ ಪ್ರಮಾಣ ಅನುಕ್ರಮವಾಗಿ 4547 ದಶಲಕ್ಷ ಯೂನಿಟ್, 2887 ದಶಲಕ್ಷ ಯೂನಿಟ್ ಮತ್ತು 874 ದಶಲಕ್ಷ ಯೂನಿಟ್‌ಗಳು ಮತ್ತು ಒಟ್ಟು ಲಭ್ಯವಿದ್ದ ವಿದ್ಯುತ್ ಪ್ರಮಾಣ 8308 ದಶಲಕ್ಷ ಯೂನಿಟ್‌ಗಳು.

ಕಳೆದ ಎರಡು ವಾರಗಳಲ್ಲಿ ಸ್ವಲ್ಪ ಮಳೆ ಉಂಟಾಗಿದ್ದರೂ, ಕಳೆದ ಎರಡು ದಿನಗಳಿಂದ ಮಳೆಯ ಪ್ರಮಾಣವು ಗಣನೀಯವಾಗಿ ಕಡಿಮೆಯಾಗಿದೆ. ಸಧ್ಯದ ಭವಿಷ್ಯದಲ್ಲಿ ಪರಿಸ್ಥಿತಿಯಲ್ಲಿ ಹೆಚ್ಚಿನ ಸುಧಾರಣೆ ಉಂಟಾಗದೆಂದು ನಿರೀಕ್ಷಿಸಿದೆ. ರಾಜ್ಯದ ಎಲ್ಲಾ ಮೂಲಗಳಿಂದ ದಿನವಹಿ ಲಭ್ಯವಿರುವ ವಿದ್ಯುತ್ ಪ್ರಮಾಣವು ಕೇವಲ 33.1 ದಶಲಕ್ಷ ಯೂನಿಟ್‌ಗಳೆಂದು ಅಂದಾಜು ಮಾಡಲಾಗಿದೆ, ಮತ್ತು ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಯೋಜನೆಗಳಿಂದ ದಿನವಹಿ ಲಭ್ಯವಿರುವ ರಾಜ್ಯದ ಪಾಲು 11 ದಶಲಕ್ಷ ಯೂನಿಟ್‌ಗಳು. ದಿನವಹಿ ಸರಾಸರಿ ವಿದ್ಯುತ್ ಬೇಡಿಕೆ 59.7 ದಶಲಕ್ಷ ಯೂನಿಟ್‌ಗಳಾಗಿದ್ದು, ಒಟ್ಟಾರೆ ವಿದ್ಯುತ್ ಲಭ್ಯತೆಯು 44.1 ದಶಲಕ್ಷ ಯೂನಿಟ್‌ಗಳಾಗಿವೆ. ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಯೋಜನೆಗಳಲ್ಲಿ ಹಂಚಿಕೆಯಾಗದೆ ಇರುವ ವಿದ್ಯುತ್‌ನಲ್ಲಿ ಹೆಚ್ಚಿನ ಪ್ರಮಾಣದ ನೆರವನ್ನು ಪಡೆಯಲು ಪ್ರಯತ್ನಗಳನ್ನು ಮಾಡಲಾಗಿದೆ. ಈ ವಿಷಯದಲ್ಲಿ ನಾನು ನವ ದೆಹಲಿಯಲ್ಲಿ ಮಾನ್ಯ ಕೇಂದ್ರ ವಿದ್ಯುತ್ ಸಚಿವರೊಡನೆ ಸಮಾಲೋಚನೆ ನಡೆಸಿದ್ದು, ಮಾನ್ಯ ಸಚಿವರು ರಾಜ್ಯಕ್ಕೆ ಇನ್ನೂ ಒಂದು ದಶಲಕ್ಷ ಯೂನಿಟ್ ವಿದ್ಯುತನ್ನು ಹೆಚ್ಚುವರಿಯಾಗಿ ಒದಗಿಸುವ ಭರವಸೆ ನೀಡಿದ್ದಾರೆ. ನಮ್ಮ ಅಧಿಕಾರಿಗಳು ಮಹಾರಾಷ್ಟ್ರದ ಅಧಿಕಾರಿಗಳನ್ನು ಸಂಪರ್ಕಿಸಿ ಮಹಾರಾಷ್ಟ್ರದಿಂದ ರಾತ್ರಿ ಪೀಕ್ ಸಮಯಗಳ ನಂತರ ಪ್ರತಿ ದಿನ ಒಂದು ದಶಲಕ್ಷ ಯೂನಿಟ್ ವಿದ್ಯುತ್‌ನ್ನು ಪಡೆಯಲು ಸಮಾಲೋಚನೆ ನಡೆಸಿದ್ದಾರೆ. ಇವುಗಳಿಂದಾಗಿ ಲಭ್ಯವಿರುವ ಒಟ್ಟು ವಿದ್ಯುತ್ ಪ್ರಮಾಣವು ಸುಮಾರು 46.1 ದಶಲಕ್ಷ ಯೂನಿಟ್‌ಗಳಾಗಿದ್ದು, ವಿದ್ಯುತ್ ಕೊರತೆಯ ಪ್ರಮಾಣವು ಪ್ರತಿ ದಿವಸ ಸುಮಾರು 13.6 ದಶಲಕ್ಷ ಯೂನಿಟ್ ಆಗುತ್ತದೆ. ಆದ್ದರಿಂದ, ವಿದ್ಯುತ್ ಕಡಿತವನ್ನು ವಿಧಿಸಬೇಕಾಗಿರುವ ಪರಿಸ್ಥಿತಿ ಉಂಟಾಗಿದೆ.

ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ವಿದ್ಯುತ್ ಪರಿಸ್ಥಿತಿಯ ಅವಲೋಕನಕ್ಕಾಗಿ ಮತ್ತು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಶಿಫಾರಸ್ಸು ಮಾಡುವ ಸಲುವಾಗಿ ಒಂದು ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯು ಎಲ್ಲಾ ವಿಷಯಗಳನ್ನು ಸಮಗ್ರವಾಗಿ ಪರಿಶೀಲಿಸಿ, ವಿದ್ಯುತ್ ವಿಷಮ ಪರಿಸ್ಥಿತಿಯನ್ನು ಎದುರಿಸಲು ಕೆಳಕಂಡ ಮಾರ್ಗೋಪಾಯಗಳ ಅಗತ್ಯವನ್ನು ಮನಗಂಡಿದೆ.

1) ಕೆಲವು ವರ್ಗದ ವಿದ್ಯುತ್ ಗ್ರಾಹಕರುಗಳಿಗೆ ವಿದ್ಯುತ್ ಕಡಿತವನ್ನು ವಿಧಿಸುವುದು.

2) ಪ್ರತಿ ದಿನ ಬೆಳಗಿನ ಸಮಯದಲ್ಲಿ ಮೂರು ಗಂಟೆಗಳ ಅವಧಿಗೆ ಮತ್ತು ಸಂಜೆಯ ಸಮಯದಲ್ಲಿ ಒಂದು ಗಂಟೆಯ ಅವಧಿಗೆ " ಸ್ಟ್ಯಾಗರ್ಡ " ರೀತಿಯಲ್ಲಿ ನಗರ ಪ್ರದೇಶದ ಫೀಡರ್‌ಗಳನ್ನು ಬಂದ್ ಮಾಡುವುದು.

3) ದಿನ ಬಿಟ್ಟು ದಿನಗಳಲ್ಲಿ ಗ್ರಾಮಾಂತರವು ಪ್ರದೇಶದ ಫೀಡರ್‌ಗಳಿಗೆ ಸಬ್ ಸ್ಟೇಷನ್‌ಗಳಲ್ಲಿ ಅಳವಡಿಸಿರುವ ರೋಸ್ಟರ್ ಸ್ವಿಚ್‌ಗಳನ್ನು ಚಾಲನೆ ಮಾಡಿ, ನೀರಾವರಿ ಪಂಪುಸೆಟ್ಟುಗಳಿಗೆ ಮತ್ತು 3 ಫೇಸ್‌ನಲ್ಲಿ ವಿದ್ಯುತ್ ಸರಬರಾಜು ಪಡೆಯುವ ವಿದ್ಯುತ್ ಗ್ರಾಹಕರುಗಳು ವಿದ್ಯುತ್ ಬಳಸದಂತೆ ನಿಬಂಧಿಸುವುದು.

ವಿದ್ಯುತ್ ಕಡಿತದ ಮಟ್ಟ ಮತ್ತು ಮೇಲಿನ ಕ್ರಮಗಳಿಂದ ನಿರೀಕ್ಷಿತ ಪರಿಹಾರ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ವಿವರಗಳು	ಉದ್ದೇಶಿತ ಡಿಮ್ಯಾಂಡ್ ಕಡಿತ	ಉದ್ದೇಶಿತ ಎನರ್ಜಿ ಕಡಿತ	ವಿದ್ಯುತ್‌ನ ಉಳಿತಾಯ ದಶಲಕ್ಷ ಯೂನಿಟ್‌ಗಳಲ್ಲಿ
1.	ಎಲ್. ಟಿ. ಪವರ್	00	ಶೇ. 30	1-02
2.	ಹೆಚ್. ಟಿ ಪವರ್	ಶೇ. 25	ಶೇ. 50	5-98
3.	ಕೆ.ಐ.ಓ.ಸಿ.ಎಲ್ (ಕುದುರೆ ಮುಖ ಕಬ್ಬಿಣ ಅದಿರು ಸಂಸ್ಥೆ)	ಶೇ. 25	ಶೇ.30	0-68
4.	ಗ್ರಾಮಾಂತರ ಫೀಡರ್ ಗಳನ್ನು ಬಂದ್ ಮಾಡುವುದರಿಂದ	-	-	7-00
5.	ನಗರ ಪ್ರದೇಶ ಫೀಡರ್ ಗಳನ್ನು ಬಂದ್ ಮಾಡುವುದರಿಂದ	-	-	1-30
			ಒಟ್ಟು	15-98

ಮೇಲಿನ ಕ್ರಮಗಳಲ್ಲದೇ, ಇನ್ನೂ ಬೇರೆ ಮಾರ್ಗೋಪಾಯಗಳನ್ನು ಪರಿಶೀಲಿಸಲಾಗುತ್ತಿದೆ. ಪರಿಸ್ಥಿತಿಯನ್ನು ಏಕ ಪ್ರಕಾರವಾಗಿ ಅವಲೋಕನ ಮಾಡಲಾಗುವುದು.

ಸದನದಲ್ಲಿ ನೀಡಲಾಗಿದ್ದ ಆಶ್ವಾಸನೆಯಂತೆ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಮೊದಲು, ಈ ವಿಷಯವನ್ನು ಸದನದ ಮುಂದೆ ಚರ್ಚೆಗಾಗಿ ಮಂಡಿಸಿದೆ.

ಶ್ರೀ ಜೆ. ಎಚ್. ಶ್ರೀ ರಾಮರೆಡ್ಡಿ :- ಮಾನ್ಯ ಉಪಾಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟ ಹಾಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾವ ಮಾಡಬೇಕು ಎಂದು ನಾನು ಆಗಲೇ ತಮ್ಮಲ್ಲಿ ಮನವಿ ಮಾಡಿಕೊಂಡಿದ್ದೇನೆ. ಈ ಸನ್ಯಾನ್ಯ ಕಾನೂನು ಮಂತ್ರಿಗಳು....

ಉಪಾಧ್ಯಕ್ಷರು :- ಈಗ ಉಪ ಮುಖ್ಯ ಮಂತ್ರಿಗಳು ಇಲ್ಲ. ಬಂದ ಮೇಲೆ ಚರ್ಚೆ ಮಾಡೋಣ.

ಶ್ರೀ ಎಂ. ಸಿ. ನಾಣಯ್ಯ :- ಅವರು ಬಂದ ಮೇಲೆ ಚರ್ಚೆ ಮಾಡೋಣ. ಈಗ ಅಂತಿಮ ತೀರ್ಮಾನವನ್ನೇನೂ ತೆಗೆದುಕೊಂಡಿಲ್ಲ. ಈ ಹಿಂದೆ ವಿದ್ಯುತ್ ಮಂತ್ರಿಗಳು ಇದರ ಬಗ್ಗೆ ಈಗ ಇರತಕ್ಕಂಥ ಪರಿಸ್ಥಿತಿಯ ವಸ್ತುಸ್ಥಿತಿಯನ್ನು ಸದನಕ್ಕೆ ಮಂಡಿಸುತ್ತೇನೆ ಎಂದು ಹೇಳಿದ್ದರು. ಅದಕ್ಕೆ ಅನುಗುಣವಾಗಿ ಆ ವಸ್ತುಸ್ಥಿತಿಯನ್ನು ಇವತ್ತು ಮಂಡಿಸಿದ್ದಾರೆ. ಮುಂದಿನ ದಿನಗಳಲ್ಲಿ ಎಲ್ಲಿಯಾದರೂ ಮಳೆ ಹೆಚ್ಚಾಗಿ ಬಂದಾದ ಮೇಲೆ ಬಹುಶಃ ಈ ಒಂದು ವಿವರಣೆ ಏನಿದೆ, ಅದು ಬದಲಾವಣೆ ಆಗಲೂ ಬಹುದು. ಬಹುಶಃ ಎಲ್ಲೂ ಆಗದೇ ಹೋದಂಥ ಪರಿಸ್ಥಿತಿಯಲ್ಲಿ ಏನುಮಾಡಬೇಕು ಎಂದು ಹೇಳುವಂಥ ಒಂದು ವಿಚಾರವನ್ನು ಇಲ್ಲಿ ಈ ಸದನದ ಮುಂದೆ ಅವರು ಮಂಡಿಸಿದ್ದಾರೆ. ಬಹುಶಃ ಅವರು ಬರುವವರಿದ್ದಾರೆ. ಅವರಿಗೆ ನಾನು ತಿಳಿಸುತ್ತೇನೆ. ಅವರು ಬಂದಾದಮೇಲೆ ಇದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಜೆ. ಎಚ್. ರಾಮರೆಡ್ಡಿ :- ಬಹುಶಃ ಬರುವವರಿದ್ದಾರೆ. ಅದರ ಬಗ್ಗೆ ಚರ್ಚೆ ಮಾಡುವುದು ಯಾವಾಗ? ಇದು ಬಹಳ ಗಂಭೀರವಾದಂಥ ವಿಷಯ. ಈಗ ಉಪ ಮುಖ್ಯ ಮಂತ್ರಿಗಳು ಸದನಕ್ಕೆ ಬಂದು ಅವರು ಹೇಳಿಕೆಯನ್ನು ಹೇಳಿದ ತಕ್ಷಣ ಅವರು ಇಲ್ಲಿ ಇರಬೇಕು. ನಿಜವಾಗಿ ಈ ಹೇಳಿಕೆಯನ್ನು ಅವರು ಓದಬೇಕಾಗಿತ್ತು. ಅವರು ಇಲ್ಲದೇ ಇದನ್ನು ಮಂಡನೆ ಮಾಡಿರತಕ್ಕಂಥಾದ್ದೇ ಸರಿಯಿಲ್ಲ ಎನ್ನುವುದು ಒಂದನೆಯುದು. ಏಕೆಂದರೆ ಅವರೇ ಇಲ್ಲಿ ಪ್ರಾಮಿಸ್ ಮಾಡಿದ್ದಾರೆ. `` However I promise that the matter is placed on the table of the House for discussion, before final decision is taken" ಎಂದು ಹೇಳಿದ್ದಾರೆ. ಅಂತಿಮವಾಗಿ ತೀರ್ಮಾನ ತೆಗೆದುಕೊಳ್ಳಬೇಕಾದರೆ ಚರ್ಚೆ ಮಾಡಬೇಕು ಎಂದು ಹೇಳಿದ್ದಾರೆ. ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ಉಪ ಮುಖ್ಯ ಮಂತ್ರಿಗಳು ಇಲ್ಲಿ ಇಲ್ಲದೇ ಒಂದು ಹೇಳಿಕೆಯನ್ನು ಕೊಟ್ಟುಬಿಟ್ಟು, ಬಹುಶಃ ಅವರು ಬರಬಹುದು, ಚರ್ಚೆ ಮಾಡಬಹುದು ಎಂದು ಹೇಳಿದರೆ ಹೇಗೆ? ಏಕೆಂದರೆ, ಬಹುಶಃ ನನಗೆ ತಿಳಿದಿರುವ ಮಟ್ಟಿಗೆ ಈ ಅಧಿವೇಶನ ಇವತ್ತು ಕೊನೆಯಾಗುತ್ತದೆ. ಮತ್ತು ನಾವು ಚರ್ಚೆ ಮಾಡುವುದು ಯಾವಾಗ? ಬಹಳ ಗಂಭೀರವಾದಂಥ ಪರಿಸ್ಥಿತಿ ಇದು. ಕೆಲವು ಕಡೆ ಮಳೆ ಬಿದ್ದಿಲ್ಲ, ಕೆರೆಗಳು ತುಂಬಿಲ್ಲ. ಅವರಿಗೆಲ್ಲಾ ಪಂಪುಸೆಟ್ಟುಗಳೇ ಆಧಾರವಾಗಿ ಇರತಕ್ಕಂಥ ಸಂದರ್ಭದಲ್ಲಿ, ನಾನು ತಮ್ಮ ಮುಖಾಂತರ ಮಾನ್ಯ ಉಪ ಮುಖ್ಯ ಮಂತ್ರಿಗಳನ್ನು ಮನವಿ ಮಾಡುತ್ತಿದ್ದೇನೆ, ತಕ್ಷಣ ಅವರನ್ನು ಕರೆಯಿಸಿ,

ಮೊದಲು ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕು, ದಯವಿಟ್ಟು ತಾವು ಅವರನ್ನು ಕರೆಯಿಸಬೇಕು ಎಂದು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಯು. ಆರ್. ಸಭಾಪತಿ :- ಸನ್ಮಾನ್ಯ ಉಪಾಧ್ಯಕ್ಷರೇ, ಇದು ಬಹಳ ಮಹತ್ವ ಪೂರ್ಣವಾದಂಥ ಹೇಳಿಕೆ. ಈ ಹೇಳಿಕೆಯನ್ನು ನಾವು ಉಪ ಮುಖ್ಯ ಮಂತ್ರಿಗಳ ಬಾಯಿಂದಲೇ ಕೇಳಬೇಕಾಗಿತ್ತು. ಇದನ್ನು ಅವರ ಅನುಪಸ್ಥಿತಿಯಲ್ಲಿ ಓದುವ ಉದ್ದೇಶ ನನಗೆ ಅರ್ಥವಾಗುತ್ತಿಲ್ಲ. ಪ್ರಾಯಶಃ ತಾವು ನಾಳೆ ಸಭೆಯನ್ನು ಮುಂದುವರಿಸುತ್ತೀರೋ, ಇಲ್ಲವೋ ನನಗೆ ಗೊತ್ತಿಲ್ಲ. ಇದಕ್ಕೆ ವಿಷದವಾಗಿ ಕನಿಷ್ಠ ಪಕ್ಷ ಒಂದು ಗಂಟೆಯಾದರೂ ನಾವು ಇದರ ಬಗ್ಗೆ ಚರ್ಚೆ ಮಾಡಲೇಬೇಕಾಗಿದೆ. ಆದ್ದರಿಂದ ತಾವು ದಯವಿಟ್ಟು ಈಗಲೆ ಉಪ ಮುಖ್ಯ ಮಂತ್ರಿಯವರು ಎಲ್ಲಿದ್ದರೂ ಕೂಡ ಇಲ್ಲಿಗೆ ಕರೆಸಿ ಬಿಟ್ಟರೆ, ಅತ್ಯಂತ ಪ್ರಾಮುಖ್ಯವಾದಂಥ ವಿಚಾರದ ಬಗ್ಗೆ ಚರ್ಚೆಗೆ ನಮಗೆ ಅನುಕೂಲ ಮಾಡಿಕೊಡಬಹುದು ಎಂದು ನನ್ನ ನಂಬಿಕೆ. ತಾವು ದಯವಿಟ್ಟು ಉಪ ಮುಖ್ಯ ಮಂತ್ರಿಗಳನ್ನು ಕರೆಸಿ, ಇದರ ಬಗ್ಗೆ ಕೂಲಂಕುಷ ಚರ್ಚೆಗೆ ಅವಕಾಶ ಮಾಡಿ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಶ್ರೀನಿವಾಸ ಗೌಡ :- ಮಾನ್ಯ ಉಪಾಧ್ಯಕ್ಷರೇ, ಇದು ಬಹಳಗಹನವಾದ ವಿಷಯ. ಇವತ್ತು ನಮ್ಮ ಉಪ ಮುಖ್ಯ ಮಂತ್ರಿಗಳ ಹೇಳಿಕೆಯನ್ನು ನೋಡಿದ ಮೇಲೆ ನಾವು ಇದನ್ನು ಚರ್ಚೆ ಮಾಡದೇ ಹೋದರೆ ಇದು ಅಪಕೃತವಾಗುತ್ತದೆ. ಇವತ್ತು ಗ್ರಾಮೀಣ ಭಾಗ ದಲ್ಲಿ ಕರೆಂಟನ್ನು ಕಟ್ ಮಾಡಬೇಕು ಎನ್ನುವಂಥ ಮಾತನ್ನು ಅವರ ಹೇಳಿಕೆಯಲ್ಲಿ ಹೇಳಿದ್ದಾರೆ. ಅವರು ಇಲ್ಲದೇ ಚರ್ಚೆ ಮಾಡುವುದು ಅಪಕೃತವಾಗುತ್ತದೆ. ಆದ್ದರಿಂದ ಮಾನ್ಯ ಉಪಾಧ್ಯಕ್ಷರಲ್ಲಿ ನನ್ನ ಮನವಿ ಏನೆಂದರೆ ತಾವು ಅವರನ್ನು ಕರೆಯಿಸಬೇಕು. ಸದನಕ್ಕೆ ಕರೆಯಿಸಿ ಇದರ ಬಗ್ಗೆ ಒಂದು ಗಂಟೆಯಲ್ಲ, ಎರಡು ಗಂಟೆಯಾದರೂ ಚರ್ಚೆ ಮಾಡಬೇಕು. ಇದು ಬಹಳ ಗಹನ ವಾದ ವಿಷಯ. ಇವತ್ತು ನಮ್ಮ ಕೋಲಾರ ಜಿಲ್ಲೆಯಲ್ಲಿ ಕರೆಂಟ್ ಇಲ್ಲದೇ ಇದ್ದರೆ ಕುಡಿಯು ವುದಕ್ಕೆ ನೀರೂ ಕೂಡ ಸಿಗುವಂಥ ಪರಿಸ್ಥಿತಿ ಇಲ್ಲ. ವ್ಯವಸಾಯಕ್ಕಿಂತ ಕುಡಿಯುವ ನೀರಿಗೂ ಕೂಡ ನಾವು ತೊಂದರೆ ಅನುಭವಿಸಬೇಕಾಗುತ್ತದೆ. ಆದ್ದರಿಂದ ಉಪ ಮುಖ್ಯ ಮಂತ್ರಿಗಳನ್ನು ಸದನಕ್ಕೆ ಬೇಗನೆ ಕರೆಸಿ, ಇದನ್ನು ಸುದೀರ್ಘವಾಗಿ ಒಂದು ಗಂಟೆ ಅಥವಾ ಎರಡು ಗಂಟೆಯಾ ದರೂ ಚರ್ಚೆ ಮಾಡಬೇಕು ಎಂದು ತಮ್ಮ ಮೂಲಕ ನಾನು ಪ್ರಾರ್ಥಿಸಿ ಕೊಳ್ಳುತ್ತೇನೆ.

ಶ್ರೀ ಡಿ. ಕೆ. ಶಿವಕುಮಾರು :- ಮಾನ್ಯ ಉಪಾಧ್ಯಕ್ಷರೇ, ಈ ಒಂದು ವಿಚಾರ ಇಡೀ ಸದನದ ಒಂದು ಗಮನವನ್ನು ಸೆಳೆಯತಕ್ಕಂಥಾದ್ದು ಆಗಿದೆ. ಏಕೆಂದರೆ ಇರತಕ್ಕಂಥ ಪರಿಸ್ಥಿತಿಯನ್ನು ವಾಸ್ತವವಾಗಿ ನಾವು ಒಪ್ಪಿಕೊಳ್ಳಲೇಬೇಕಾಗುತ್ತದೆ. ಕೊರತೆ ಹಂಚಿಕೊಳ್ಳುವ ರೀತಿಯಲ್ಲಿ ಕೂಡ ನಾವು ಯಾವ ರೀತಿ ಕಾರ್ಯಕ್ರಮ ಹಾಕಿಕೊಳ್ಳಬೇಕು ಎನ್ನತಕ್ಕಂಥಾದ್ದೂ ಕೂಡ ಒಂದು ಮುಖ್ಯವಾದಂಥ ಅಂಶ. ನಾನು ಇಂಧನ ಇಲಾಖಾ ವಿಷಯ ಸಮಿತಿಯ ಅಧ್ಯಕ್ಷನಾಗಿ ಇದರ ವಿಚಾರದಲ್ಲಿ ಯಾವ ರೀತಿ ನಾವು ಕೊರತೆಯನ್ನು ಹಂಚಿಕೊಂಡರೆ ಬಹುತೇಕ ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕಂಥ ಸಮಸ್ಯೆಗೆ ಕೂಡ ಸ್ವಲ್ಪ ಮಟ್ಟಿಗೆ ಅನು ಕೂಲವಾಗುತ್ತದೆ ಎನ್ನತಕ್ಕಂಥಾದ್ದಕ್ಕೆ ಬೆಳಕನ್ನು ಚೆಲ್ಲಬೇಕಾಗಿರುವುದರಿಂದ ತಮ್ಮ ಮೂಲಕ ಕೇಳಿ ಕೊಳ್ಳುತ್ತಿದ್ದೇನೆ, ಸನ್ಮಾನ್ಯ ಉಪ ಮುಖ್ಯ ಮಂತ್ರಿಯವರು ಬರಬೇಕು ಮತ್ತು ಇವೆಲ್ಲದರ ಬಗ್ಗೆ ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ.

ಶ್ರೀ ಬಿ. ಚಂದ್ರಣ್ಣ :- ಏಕೆಂದರೆ ನಾವು ವಿದ್ಯುಚ್ಛಕ್ತಿಗೋಸ್ಕರ ಕಾಯುತ್ತಾ ಕೂತಿರುವುದರಿಂದ ಇದನ್ನು ಸ್ವಲ್ಪ ಗಂಭೀರವಾಗಿ ಯೋಚನೆ ಮಾಡಬೇಕಾಗುತ್ತದೆ. ಚರ್ಚೆ ಮಾಡುವುದಕ್ಕೆ ತಾವು ದಯವಿಟ್ಟು ಅವಕಾಶ ಕೊಡಬೇಕೆಂದು ನಾನು ಸಹಿತ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಉಪಾಧ್ಯಕ್ಷರು :- ಇದು ಪ್ರಮುಖವಾದ ಪ್ರಶ್ನೆ. ಆದಷ್ಟು ಬೇಗ ಅವರನ್ನು ಕರೆಯಿಸುವ ವ್ಯವಸ್ಥೆ ಮಾಡುತ್ತೇನೆ.

ಅಧ್ಯಕ್ಷರ ಅಪ್ಪಣೆ ಪಡೆದು ಪ್ರಸ್ತಾಪಿಸಲಾದ ವಿಷಯ.

ವಿಷಯ :- ಬೇತಮಂಗಲ ತಾಲ್ಲೂಕಿನಲ್ಲಿ ಅಂಧ ಮತ್ತು ಕಿವುಡ ಮಕ್ಕಳ ಹಾಸ್ಟೆಲ್‌ನಲ್ಲಿ ನಡೆದ ಧಾರುಣ ಕೃತ್ಯ.

+**ಶ್ರೀ ಜೆ. ವಿ. ಶ್ರೀ ರಾಮರೆಡ್ಡಿ :-** ಸನ್ಮಾನ್ಯ ಉಪಾಧ್ಯಕ್ಷರೇ, ನಿನ್ನೆ ನಾನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದಂಥ ವಿಷಯ. ಬೇತಮಂಗಲ ತಾಲ್ಲೂಕಿನ ಒಂದು ಅಂಧ ಮತ್ತು ಕಿವುಡ ಮಕ್ಕಳ ಹಾಸ್ಟೆಲ್‌ನಲ್ಲಿ ನಡೆದ ದಾರುಣ ಕೃತ್ಯದ ಬಗ್ಗೆ ನಿನ್ನೆ ದಿವಸ ಶೂನ್ಯವೇಳೆಯಲ್ಲಿ ನಾನು ಪ್ರಸ್ತಾಪ ಮಾಡಿದ್ದೆ. ಇದರ ಬಗ್ಗೆ ಇಡೀ ವರದಿಯನ್ನು ತರಿಸಿಕೊಂಡು ಇವತ್ತು ಸದನದ ಮುಂದೆ ಹೇಳುತ್ತೇನೆ ಎಂದು ಸಂಬಂಧಪಟ್ಟ ಮಂತ್ರಿಗಳಾದ ಶ್ರೀಮತಿ ಲಲಿತಾ ನಾಯಕ್ ಅವರು ಹೇಳಿದ್ದರು. ಇದು ಏನಾಯಿತು? ಏಕೆಂದರೆ ಇದು ಗಂಭೀರವಾದ ವಿಷಯ. ನಿನ್ನೆ ಅವರು ಹೇಳಿದರು ಏನೆಂದರೆ ಈ ಸದನದಲ್ಲಿ ನಾಳೆ ಅದರ ವರದಿಯನ್ನು ತಂದಿಡುತ್ತೇನೆ ಎಂದು.

ಶ್ರೀ ಕೆ. ಶ್ರೀನಿವಾಸಗೌಡ :- ಮಾನ್ಯ ಅಧ್ಯಕ್ಷರೇ.....

ಉಪಾಧ್ಯಕ್ಷರು :- ಒಂದು ನಿಮಿಷ ಇರಿ. ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀಮತಿ ಬಿ. ಟಿ. ಲಲಿತಾ ನಾಯಕ್ :- ಕೋಲಾರಕ್ಕೆ ಡೈರೆಕ್ಟರ್ ಅವರನ್ನು ಕಳುಹಿಸಲಾಗಿದೆ ಕೋಲಾರದಿಂದ ಇನ್ನೂ ಉತ್ತರ ಬಂದಿಲ್ಲ. ಅದಕ್ಕಾಗಿ ಕಾಯುತ್ತಿರುತ್ತೇನೆ ಎಂದು ಅವರು ತಿಳಿಸಿದ್ದಾರೆ. ಉತ್ತರ ಬಂದತಕ್ಷಣ ತಮ್ಮ ಕಚೇರಿಗೆ ಬರುತ್ತೇನೆ ಎಂದು ಅವರಿಂದ ಪತ್ರ ಬಂದಿದೆ.

ಶ್ರೀ ಜೆ. ವಿ. ಶ್ರೀ ರಾಮರೆಡ್ಡಿ :- ನಿನ್ನೆಯಿಂದ ಕೋಲಾರದಿಂದ ಒಂದು ಉತ್ತರವನ್ನು ತರಿಸಿಕೊಳ್ಳುವುದಕ್ಕೆ ಆಗಿಲ್ಲವೆಂದರೆ ಹೇಗೆ? ಇದು ಬಹಳ ಧಾರುಣವಾದ ಘಟನೆ ನಡೆದಿದೆ. ಅಂಧ ಮತ್ತು ಕಿವುಡ ಮಕ್ಕಳು ಹಾಸ್ಟೇಲ್‌ನಲ್ಲಿ ಹಿಂಸೆ ತಾಳಲಾರದೆ ಅವರು ಹಾಸ್ಟೆಲ್ ಬಿಟ್ಟುಹೋಗಿ ಬಜಾರ್‌ನಲ್ಲಿ ಬಿದ್ದಿರತಕ್ಕಂಥ ಸಂದರ್ಭದಲ್ಲಿ ನಾನು ನಿನ್ನೆ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಇವತ್ತು ವರದಿಯನ್ನು ತರಿಸುತ್ತೇನೆ ಎಂದು ಮಾನ್ಯ ಮಂತ್ರಿಗಳು ಸದನಕ್ಕೆ ಆಶ್ವಾಸನೆಯನ್ನು ಕೊಟ್ಟು ಇದುವರೆಗೂ ಕೋಲಾರದಿಂದ ಈ ಸಂಬಂಧವಾಗಿ ವರದಿಯನ್ನು ತರಿಸಲಿಕ್ಕೆ ಆಗಲಿಲ್ಲವೆಂದರೆ ಹೇಗೆ?

(ಗೊಂದಲ)